ದಸ್ತಗಿರಿ ಮಾಡಲಾಗುತ್ತದೆ. 'ಜೈಲು ಸೇರುವವರೆಗಿನ ನನ್ನ ಬದುಕು ಅತ್ಯಂತ ಕಠೋರ ಹಾಗೂ ರಕ್ತಮಯ. ಈ ವಿವರಗಳನ್ನು ಉದ್ದೇಶಪೂರಕವಾಗಿ ನಿಮಗೆ ಹೇಳುತ್ತಿಲ್ಲ. ಆ ಹಿಂಸೆಯ ವಿವರಗಳನ್ನು ನನಗೆ ಬರೆಯಲೂ ಸಾಧ್ಯವಿಲ್ಲ, ನಿಮಗೆ ಓದಲೂ ಆಗುವುದಿಲ್ಲ' ಎಂದಿದ್ದಾರೆ.

ಅವರ ಜೀವನದ ಮಹತ್ವದ ತಿರುವು ದೊರೆತದ್ದು ಸೆರೆವಾಸದಲ್ಲಿ; ಆಗ ಅವರ ವಯಸ್ಸು ಇಪ್ಪತ್ನಾಲ್ಕು. 'ನೋಡಿದರೆ ಹಳ್ಳಿ ಶಾಲೆಯ ಮಾಸ್ತರನಂತೆ ಕಾಣುತ್ತಿದ್ದ ಕೈದಿಯೊಬ್ಬ ಕಲಿಸಿದ ಅಕ್ಷರಾಭ್ಯಾಸದಿಂದ ಓದಲು, ಬರೆಯಲು ಅವಕಾಶವಾಯಿತು. ಮರದ ಕಡ್ಡಿಯಿಂದ ನೆಲದ ಮೇಲೆ ಅಕ್ಷರವನ್ನು ತಿದ್ದಲು ಆರಂಭಿಸಿದ ಬ್ಯಾಪಾರಿಗೆ ಭುವನ್‌ಸಿಪಾಯಿ ಎಂಬಾತ ಯಾರಿಗೂ ಗೊತ್ತಾಗದ ಹಾಗೆ ಸೀಮೆಸುಣ್ಣದ ಡಬ್ಬಾ ಕೊಟ್ಟು, 'ನಿನ್ನ ಸಾಧನೆಗೆ ನನ್ನ ಪುಟ್ಟ ಕಾಣಿಕೆ' ಎಂದು ಪ್ರೋತ್ಸಾಹಿಸಿದ. ಕ್ರಮೇಣ ಅವರ ಆಸಕ್ತಿಗೆ ಮಣಿದು ಪೆನ್ನು, ಪೇಪರನ್ನು ಒದಗಿಸಲಾಗುತ್ತದೆ. ಸೆರೆಯಲ್ಲಿದ್ದ ನಕ್ಸಲರಿಂದ ಪುಸ್ತಕಗಳನ್ನು ಪಡೆದು ಓದಲಾರಂಭಿಸುತ್ತಾನೆ. ಒಮ್ಮೆ ಬ್ಯಾಪಾರಿ ಗುರುವಿನ ಪಕ್ಕ ಮಲಗಿದ್ದಾಗ, ತನಗೆ 'ತೀರಲಾಗದ ಜ್ಞಾನದ ಹಸಿವನ್ನು ನೀಡಿದ್ದ' ಗುರು ತೀವ್ರ ಹೃದಯಾಘಾತದಿಂದ ತೀರಿಕೊಳ್ಳುತ್ತಾನೆ. ಅವರನ್ನು ಸ್ಮರಿಸುವುದು ಹೀಗೆ: 'ಪ್ರೆಸಿಡೆನ್ಸಿ ಜೈಲಿನಲ್ಲಿ ಅಕ್ಷರಾಭ್ಯಾಸ ಮಾಡಿಸಿದ ನನ್ನ ಗುರುವಿಗೆ ನನ್ನ ಪ್ರಪ್ರಥಮ ಕೃತಜ್ಞತೆ ಸಲ್ಲಬೇಕು. ಅವರು ತೋರಿದ ಹಾದಿಯಿಂದಾಗಿ ನನ್ನ ಜೀವನದ ದಿಕ್ಕೇ ಬದಲಾಗಿ ಹೋಯ್ತು. ಅವರ ಪ್ರೀತಿ, ಔದಾರ್ಯ ಹಾಗೂ ಜ್ಞಾನ ನನಗೆ ಸಿಗದಿದ್ದರೆ, ಮಿಲಿಯಾಂತರ ಅನಕ್ಷರಸ್ಥರ ಹಾಗೆ ನಾನೂ ಕೂಡ ಅಜ್ಞಾನದ ಅಂಧಕಾರದಲ್ಲೇ ಮುಳುಗಿರುತ್ತಿದ್ದೆ'. ಕಳೆದುಕೊಂಡದ್ದನ್ನು ಶಿಕ್ಷಣದ ಮೂಲಕ ಮರಳಿ ಪಡೆದುಕೊಳ್ಳಬಹುದು ಎಂಬುದನ್ನು ಅರಿತ ಬ್ಯಾಪಾರಿ ಹೀಗೆ ನುಡಿಯುತ್ತಾರೆ: 'ಅಕ್ಷರಸ್ಥನಾಗುವುದಕ್ಕಿಂತ ಸುಖ ಇನ್ನೊಂದಿಲ್ಲ ಹಾಗೂ ಜೈಲಿನಲ್ಲಿರುವುದಕ್ಕಿಂದ ನರಕ ಇನ್ನೊಂದಿಲ್ಲ'. ಭಾರತೀಯ ಸಂದರ್ಭದಲ್ಲಿ ಹಿಂದುಳಿದ/ದಲಿತ ಸಮುದಾಯಗಳಿಗೆ ಅಂಬೇಡ್ಕರ್ ಹೇಳಿದ್ದೂ ಇದನ್ನೇ.

ಎರಡು ವರ್ಷಗಳ ಜೈಲುವಾಸದ ನಂತರ, ಒಂದು ಸಾವಿರ ರೂಪಾಯಿ ಶುಲ್ಕದೊಂದಿಗೆ ಬ್ಯಾಪಾರಿಯನ್ನು ಖುಲಾಸೆ ಮಾಡಲಾಯಿತು. ಜೈಲಿನಲ್ಲಿ ಇದ್ದುದ್ದರ ಬಗ್ಗೆ ಅವರಿಗೆ ಯಾವ ವಿಷಾದವಾಗಲಿ, ಬೇಸರವಾಗಲಿ ಇರಲಿಲ್ಲ. ಅವರಲ್ಲಿ ಪುಸ್ತಕಗಳನ್ನು ಓದುವ, ಜ್ಞಾನದ ಸಂಪಾದನೆ ಮಾಡುವ ದಾಹ ಆವರಿಸಿತ್ತು. ರೈಲ್ವೆ ಸ್ಟೇಷನ್, ದಾರಿ ಮಗ್ಗುಲ ಅಂಗಡಿಯನ್ನು ಬಿಡದೆ ಸಿಕ್ಕಸಿಕ್ಕ ಕಡೆಗಳಲ್ಲೆಲ್ಲಾ ಪುಸ್ತಕಗಳನ್ನು ಹುಡುಕಾಡಿದರು. ಮಾರ್ಕ್ಸ್ ಸಾಹಿತ್ಯ, ರವೀಂದ್ರನಾಥ ಟ್ಯಾಗೋರ್, ಶರಶ್ಚಂದ್ರ, ಬಂಡೋಪಾಧ್ಯಾಯ, ತಾರಾಶಂಕರ್, ಮಹಾಶ್ವೇತಾದೇವಿ, ಮಾಣಿಕ್‌ರ ಸಾಹಿತ್ಯ ಮುಂತಾದ ಬಂಗಾಳಿ ಬರಹಗಾರರ ಕೃತಿಗಳನ್ನು ಓದಿದರು. ಜ್ಞಾನದ ಹಸಿವು ನೀಗಿದರೂ, ಹೊಟ್ಟೆಯ ಹಸಿವು ಮುಗಿದಿರಲಿಲ್ಲ. ಮತ್ತೆ ಸೈಕಲ್ ರಿಕ್ಷಾ ತುಳಿಯಲು ಶುರುಮಾಡಿದರು. ಪುಸ್ತಕಗಳ ಓದು ಬ್ಯಾಪಾರಿಯವರಲ್ಲಿ ಸಾಕಷ್ಟು ಪರಿವರ್ತನೆಯನ್ನು ಮಾಡಿತ್ತು; ಅದೇನೂ ಸುಲಭದ ಕೆಲಸವಾಗಿರಲಿಲ್ಲ. ಒಂದು ಕಾಲದಲ್ಲಿ ಸೈಕಲ್ ರಿಕ್ಷಾದ ಸೀಟಿನ ಕೆಳಗೆ ಚಾಕು ಇರುತ್ತಿತ್ತು; ಆ ಜಾಗದಲ್ಲಿ ಈಗ ಪುಸ್ತಕವಿದೆ.

ನಮ್ಮ ಸುತ್ತ ಅಪರೂಪದ ಪ್ರತಿಭಾವಂತರಿದ್ದಾರೆ; ಅವರ ಪ್ರತಿಭೆಯನ್ನು ಗುರುತಿಸುವ ಮನಸ್ಸು ಮತ್ತು ಕಣ್ಣುಳ್ಳವರು ವಿರಳ; ಅಂತಹವರಲ್ಲಿ ಮಹಾಶ್ವೇತಾದೇವಿ ಒಬ್ಬರು. ಅವರು ಒಮ್ಮೆ ಅನಿರೀಕ್ಷಿತವಾಗಿ ಬ್ಯಾಪಾರಿ ತುಳಿಯುತ್ತಿದ್ದ ರಿಕ್ಷಾದಲ್ಲಿ ಪ್ರಯಾಣಿಸುವ ಸಂದರ್ಭ ಒದಗಿಬರುತ್ತದೆ. ಅವರನ್ನು ಚಾಣಕ್ಯಸೇನ್ ಬರೆದ ಪುಸ್ತಕದಲ್ಲಿನ 'ಜಿಜಿಬಿಶಾ' ಎಂಬ ಕಠಿಣ ಶಬ್ದದ ಅರ್ಥವೇನೆಂದು ಕೇಳಿದಾಗ, ಆಕೆ 'ಬದುಕುವ ಛಲ' ಎಂದು ತಿಳಿಸುತ್ತಾರೆ. ಆತನಲ್ಲಿ ಹುದುಗಿದ್ದ ಅಗಾಧವಾದ ಸಾಹಿತ್ಯಾಸಕ್ತಿಯನ್ನು ಅರಿತು ಮಹಾಶ್ವೇತಾದೇವಿ ಕೇಳುತ್ತಾರೆ: 'ನಾನು ಒಂದು ಮ್ಯಾಗಜಿನ್ ಪ್ರಕಟಿಸುತ್ತೇನೆ, ಅದರಲ್ಲಿ ನಿನ್ನಂಥ ಕೂಲಿಕಾರ್ಮಿಕರು ಬರೆಯುತ್ತಾರೆ. ನೀನು ಬರೆದುಕೊಡ್ತಿಯಾ? ನಾನು ಪ್ರಕಟಿಸುತ್ತೇನೆ'. ಕಾಗದದ ಮೇಲೆ ವಿಳಾಸ ಬರೆದುಕೊಟ್ಟು 'ನಾನ್ಯಾರು ಅಂತ ನಿನಗೆ ಗೊತ್ತಾ?' ಎಂದಾಗ, ಬ್ಯಾಪಾರಿಯವರಿಗೆ ರೋಮಾಂಚನ, ಒಂದು ರೀತಿಯ ಹಿತಕರವಾದ ಕಂಪನ: 'ನನಗರಿವಿಲ್ಲದ ಹಾಗೆ ತಲೆಬಾಗಿ ಅವರ ಪಾದಗಳಿಗೆ ಉದ್ದಂಡ ನಮಸ್ಕಾರ ಮಾಡಿದೆ... ಅಂದು ಎದೆಹಾಲು ಉಣಿಸಿ ಬೆಳೆಸಿದ ನನ್ನ ತಾಯಿ, ಇಂದು